# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 582 |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್ ಅರುಣ್ |
| ಉತ್ತರಿಸಬೇಕಾದ ದಿನಾಂಕ | : | 14.08.2025 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನದಾರರಿಗೆ ಮಾರಾಟ ಕ್ರಯಪತ್ರವನ್ನು ನೀಡುವಲ್ಲಿ ಕಿರುಕುಳ ತೊಂದರೆಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು: | ಇಲ್ಲ. |
| (ಆ) | ನಿವೇಶನದಾರರಿಗೆ ಅನುಕೂಲವಾಗಲು ಮಾರಾಟ ಕ್ರಯಪತ್ರಗಳನ್ನು ನೀಡುವ ಸಂಬಂಧ "ಮೇಳಗಳನ್ನು" ಆಯೋಜಿಸಲು ಸರ್ಕಾರಕ್ಕೆ ಏನು ತೊಂದರೆ ಇದೆ; ಹಾಗಿದ್ದಲ್ಲಿ ಯಾವಾಗ ಈ ಮೇಳಗಳನ್ನು ಆಯೋಜಿಸಲಾಗುವುದು; | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾಗಿರುವ ನಿವೇಶನಗಳಿಗೆ ಗುತ್ತಿಗೆ ಅವಧಿ ಮುಗಿದ ನಂತರ ನಿಯಮಾನುಸಾರ ಕ್ರಯಪತ್ರ ನೋಂದಾಯಿಸಲು ಕ್ರಮವಹಿಸಲಾಗುತ್ತಿರುವುದರಿಂದ ಕ್ರಯಪತ್ರ ನೋಂದಾಯಿಸಲು ಮೇಳವನ್ನು ಆಯೋಜಿಸುವ ಅಗತ್ಯತೆ ಕಂಡುಬಂದಿರುವುದಿಲ್ಲ. |
| (ಇ) | ಮಾರಾಟ ಕ್ರಯಪತ್ರಗಳನ್ನು ಕೋರಿ ಬಿಡಿಎಗೆ ಅರ್ಜಿ ಸಲ್ಲಿಸಿದವರ ಪೈಕಿ ಯಾರ ಯಾರ ಅರ್ಜಿಗಳು ಎಷ್ಟು ಎಷ್ಟು ಸಮಯದಿಂದ ವಿಲೇವಾರಿಗೆ ಬಾಕಿ ಇರುತ್ತದೆ; ಹರಾಜು ಮೂಲಕ ನಿವೇಶನ ಪಡೆದವರಲ್ಲಿ ಎಷ್ಟು ಮಂದಿಗೆ ಮಾರಾಟ ಕ್ರಯಪತ್ರವನ್ನು ನೀಡಬೇಕಾಗಿದೆ (ಸಂಪೂರ್ಣ ವಿವರ ನೀಡುವುದು) | ನಿವೇಶನ ಹಂಚಿಕೆದಾರರಿಗೆ ಮತ್ತು ಹರಾಜು ನಿವೇಶನದಾರರಿಗೆ ನಿಯಮಾನುಸಾರ ನಿಗದಿತ ಅವಧಿಯಲ್ಲಿ ಕ್ರಯಪತ್ರ/ ಹರಾಜು ಪತ್ರವನ್ನು ನೋಂದಾಯಿಸಲಾಗುತ್ತಿದ್ದು, ಯಾವುದೇ ಪ್ರಕರಣಗಳು ಬಾಕಿ ಇರುವುದಿಲ್ಲ. |
| (ಈ) | ಮಾರಾಟ ಕ್ರಯಪತ್ರ ನೀಡುವಲ್ಲಿ ವಿಳಂಬ ಅಸಡ್ಡೆ ತೋರುವ ಅಧಿಕಾರಿ/ನೌಕರರುಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಮಾರಾಟ ಕ್ರಯಪತ್ರವನ್ನು ನೋಂದಾಯಿಸಲು ಪ್ರಾಧಿಕಾರದ ಅಧಿಕಾರಿ/ನೌಕರರು ವಿಳಂಬ, ಅಸಡ್ಡೆ ತೋರಿರುವುದು ಗಮನಕ್ಕೆ ಬಂದಿರುವುದಿಲ್ಲ. |

**ಸಂಖ್ಯೆ: ನಅಇ 523 ಬೆಂಭೂಸ್ವಾ 2025**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ